ತಹಶೀಲ್ದಾರರ ಹುದ್ದೆಯನ್ನು ಎರಡನೇ ದರ್ಜೆಯಿಂದ ಒಂದನೆ ದರ್ಜೆಗೆ ಏರಿಸುವುದು

೩೯. ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿನ ತಾಲ್ಲೂಕು ಮ್ಯಾಜಿಸ್ಟ್ರೇಟ್ ಅನ್ನಿಸಿಕೊಂಡಿರುವ ತಹಸೀಲ್ದಾರರು, ಎರಡನೇ ದರ್ಜೆಯ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅವರನ್ನು ಒಂದನೆ ದರ್ಜೆಯ ಅಧಿಕಾರಿಗಳನ್ನಾಗಿ ಪರಿವರ್ತಿಸುವ ಉದ್ದೇಶ ಸರ್ಕಾರದವರಿಗಿದೆಯೇ?

ಶ್ರೀ ಅಜೀಜ್‌ಸೇಠ್ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಪರಿಶೀಲಿಸಲಾಗುತ್ತಿದೆ.

ಅಗ್ನಿ ಶಾಮಕ ದಳ ಘಟಕದ ಸ್ಥಾಪನೆ

೩೯. ಶ್ರೀ ಬಿ. ಹೆಚ್. ಯಂಕಾನಾಯಂಕ್ (ಹರಪನಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು ಅತಿ ದೊಡ್ಡದಾಗಿದ್ದು, ಸದರಿ ತಾಲ್ಲೂಕಿನಲ್ಲಿ ಅಗ್ನಿಶಾಮಕ ಘಟಕವಿಲ್ಲದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಗ್ನಿಶಾಮಕ ದಳದ ಘಟಕವನ್ನು ಸ್ಥಾಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ವೀರೇಂದ್ರಪಾಟೀಲ್. (ಮುಖ್ಯಮಂತ್ರಿಗಳು).—

ಅ) ಹೌದು.

ಆ) ಹರಪನಹಳ್ಳಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ೧೯೮೭-೮೮ನೇ ಆರ್ಥಿಕ ಸಾಲಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹರಪನಹಳ್ಳಿಯಲ್ಲಿ ಅಸಿಸ್ಟೆಂಟ್ ಕಮೀಷನರ್‌ರವರ ಕಛೇರಿ ಸ್ಥಾಪನೆ

೪೦. ಶ್ರೀ ಬಿ. ಹೆಚ್. ಯಂಕಾನಾಯಕ್, (ಹರಪನ ಹಳ್ಳಿ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಪನಹಳ್ಳಿಯಲ್ಲಿ ಕಂದಾಯ ಇಲಾಖೆಯ ಉಪ ಆಯುಕ್ತರವರ ಕಛೇರಿಯ ಅವಶ್ಯಕತೆ ಇದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹರಪನಹಳ್ಳಿಯಲ್ಲಿ ಒಂದು ಕಂದಾಯ ಇಲಾಖೆಯ ಉಪ ಆಯುಕ್ತರವರ ಕಛೇರಿ ಪ್ರಾರಂಭಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ?

ಶ್ರೀ ಅಜೀಜ್ ಸೇಠ್ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಜಿಲ್ಲಾ ಪುನರ್ವಿಂಗಡನಾ ಸಮಿತಿಯು ದಾವಣಗೆರೆ ಜಿಲ್ಲೆಯನ್ನಾಗಿ ರಚಿಸಲು ಶಿಫಾರಸ್ಸು ಮಾಡಿ, ದಾವಣಗೆರೆಯೊಂದಿಗೆ ಹರಿಹರ, ಚನ್ನಗಿರಿ, ಹರಪನಹಳ್ಳಿ ಮತ್ತು ರಾಣಿಬೆನ್ನೂರು ಉಪ ವಿಭಾಗವನ್ನಾಗಿ ಪರಿವರ್ತಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.